Re. • No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**

Published by Authority

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**


| | | | |
|---|---|---|---|
| सं–1 | नई दिल्ली, सोमवार, मे 5 -1997 | वैशाख 15, 1919 (शक) | खण्ड–16 |
| No. 1 | New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ | ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |


**Ministry of Law, Justice & Company Affairs**

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳ, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869-- ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಭವಿಷ್ಯ ನಿಧಿ ಅಧಿನಿಯಮ, 1925

## (1925ರ ಸಂಖ್ಯೆ 19)

[27ನೇ ಅಗಸ್ಟ್, 1925.]

ಸರ್ಕಾರಿ ಮತ್ತು ಇತರ ಭವಿಷ್ಯ ನಿಧಿಗಳಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ಅಧಿನಿಯಮ,

ಸರ್ಕಾರಿ ಮತ್ತು ಇತರ ಭವಿಷ್ಯ ನಿಧಿಗಳಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವುದು ಮತ್ತು ಕ್ರೋಡೀಕರಿಸುವುದು ವಿಹಿತವಾಗಿರುವುದರಿಂದ;

ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಭವಿಷ್ಯ ನಿಧಿ ಅಧಿನಿಯಮ, 1925 ಎಂದು ಕರೆಯತಕ್ಕದ್ದು.

(2) ಇದು [ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ]*, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(ಎ) "ಕಡ್ಡಾಯ ಠೇವಣಿ" ಎಂದರೆ, ಜೀವ ವಿಮಾ ಪಾಲಿಸಿಗೆ ಸಂಬಂಧಿಸಿದಂತೆ, ವಿಮಾ ಕಂತಿನ ಸಂದಾಯದ ಅಥವಾ ಕುಟುಂಬ ಪಿಂಚಣಿ ನಿಧಿಗೆ ಸಂಬಂಧಿಸಿದಂತೆ ಚಂದಾಗಳ ಅಥವಾ ವಿಮಾ ಕಂತಿನ ಸಂದಾಯದ ಉದ್ದೇಶಕ್ಕಾಗಿ ಹೊರತುಪಡಿಸಿ ಅನ್ಯಥಾ ನಿಧಿಯ ನಿಯಮಗಳ ಮೇರೆಗೆ, ಯಾವ ಭವಿಷ್ಯ ನಿಧಿಯನ್ನು, ಯಾವುದೇ ನಿರ್ದಿಷ್ಟಪಡಿಸಿದ ಆಕಸ್ಮಿಕತೆಯು ಸಂಭವಿಸುವವರೆಗೆ, ತಗಾದೆಯ ಮೇಲೆ ಮರು ಸಂದಾಯ ಮಾಡಬೇಕಾಗಿಲ್ಲವೋ, ಆ ಭವಿಷ್ಯ

* ಅಧಿಸೂಚನೆ ಸಂಖ್ಯೆ ಎಸ್.ಒ 3912 (ಇ) ದಿನಾಂಕ: 30ನೇ ಅಕ್ಟೋಬರ್ 2019 ನೋಡಿ, ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಮತ್ತು ಲಡಾಖ್ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅನ್ವಯವಾಗುವಂತೆ ಮಾಡಲಾಗಿದೆ.

ನಿಧಿಗೆ ಕೊಟ್ಟ ಚಂದಾ ಅಥವಾ ಅದರಲ್ಲಿ ಇಟ್ಟ ಠೇವಣಿ ಮತ್ತು ನಿಧಿಯ ನಿಯಮಗಳ ಮೇರೆಗೆ ಯಾವುದೇ ಅಂಥ ಚಂದಾ, ಠೇವಣಿ ಅಥವಾ ವಂತಿಗೆಯ ಮೇಲೆ ಒದಗಿಬಂದ ಯಾವುದೇ ವಂತಿಗೆ ಮತ್ತು ಅದು ಯಾವುದೇ ಬಡ್ಡಿ ಅಥವಾ ವೃದ್ಧಿಯನ್ನು ಮತ್ತು ಯಾವುದೇ ಅಂಥ ಆಕಸ್ಮಿಕತೆಯು ಸಂಭವಿಸಿದ ತರುವಾಯ ಚಂದಾದಾರ ಅಥವಾ ಠೇವಣಿದಾರನ ಜಮೆಗೆ ಉಳಿದಿರುವಂಥ ಯಾವುದೇ ಚಂದಾ, ಠೇವಣಿ, ವಂತಿಗೆ, ಬಡ್ಡಿ ಅಥವಾ ವೃದ್ಧಿಯನ್ನು ಸಹ ಒಳಗೊಳ್ಳುತ್ತದೆ;

(ಬಿ) "ವಂತಿಗೆ" ಎಂದರೆ, ನಿಧಿಯ ಆಡಳಿತ ನಡೆಸುತ್ತಿರುವ ಯವುದೇ ಪ್ರಾಧಿಕಾರವು ಚಂದಾಕ್ಕೆ ಅಥವಾ ಠೇವಣಿಗೆ ಅಥವಾ ನಿಧಿಯಲ್ಲಿನ ವೈಯಕ್ತಿಕ ಲೆಕ್ಕದ ಜಮೆಯಲ್ಲಿರುವ ಶಿಲ್ಕಿಗೆ ಹೆಚ್ಚುವರಿಯ ರೂಪದಲ್ಲಿ ಜಮೆ ಮಾಡಿದ ಯಾವುದೇ ಮೊಬಲಗು ಮತ್ತು "ವಂತಿಗೆ ಭವಿಷ್ಯ ನಿಧಿ" ಎಂದರೆ ಯಾವ ಭವಿಷ್ಯ ನಿಧಿಯ ನಿಯಮಗಳು, ವಂತಿಗೆಗಳನ್ನು ಜಮೆ ಮಾಡುವುದಕ್ಕಾಗಿ ಉಪಬಂಧಿಸಿರುವುವೋ ಆ ಭವಿಷ್ಯ ನಿಧಿ;

(ಸಿ) "ಅವಲಂಬಿತ" ಎಂದರೆ, ಭವಿಷ್ಯ ನಿಧಿಯ ಮೃತ ಚಂದಾದಾರನ ಅಥವಾ ಠೇವಣಿದಾರನ ಈ ಕೆಳಕಂಡ ಯಾರೇ ಸಂಬಂಧಿ, ಎಂದರೆ, ಹೆಂಡತಿ, ಗಂಡ, ತಾಯಿ–ತಂದೆ, ಮಗು, ಅಪ್ರಾಪ್ತ ವಯಸ್ಕ ಸಹೋದರ, ಅವಿವಾಹಿತ ಸಹೋದರಿ ಮತ್ತು ಮೃತನಾದ ಮಗನ ವಿಧವೆ ಮತ್ತು ಮಗು ಮತ್ತು ಚಂದಾದಾರ ಅಥವಾ ಠೇವಣಿದಾರನ ತಂದೆ/ತಾಯಿ ಜೀವಂತ ಇಲ್ಲದಿರುವಲ್ಲಿ ಪಿತಾಮಹ/ಪಿತಾಮಹಿ;

(ಡಿ) "ಸರ್ಕಾರಿ ಭವಿಷ್ಯ ನಿಧಿ" ಎಂದರೆ, ರೈಲ್ವೆ ಭವಿಷ್ಯ ನಿಧಿಯನ್ನು ಹೊರತುಪಡಿಸಿ, ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಗಳ ಅಥವಾ ಶೈಕ್ಷಣಿಕ ಸಂಸ್ಥೆಗಳಲ್ಲಿ ನಿಯೋಜಿತರಾದ ಅಥವಾ ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರವೇ ಅಸ್ತಿತ್ವದಲ್ಲಿರುವ ನಿಕಾಯಗಳಿಂದ ನಿಯೋಜಿತರಾದ ವ್ಯಕ್ತಿಗಳ ಯಾವುದೇ ವರ್ಗ ಅಥವಾ ವರ್ಗಗಳಿಗಾಗಿ ಸೆಕ್ರೆಟರಿ ಆಫ್ ಸ್ಟೇಟ್ಸ್, ಕೇಂದ್ರ ಸರ್ಕಾರ, ಸಾರ್ವಭೌಮ ಪ್ರತಿನಿಧಿ ಅಥವಾ ಯಾವುದೇ ರಾಜ್ಯಸರ್ಕಾರದ ಪ್ರಾಧಿಕಾರದ ಮೂಲಕ ರಚಿತವಾದ ಭವಿಷ್ಯನಿಧಿ ಮತ್ತು ಈ ಅಧಿನಿಯಮದಲ್ಲಿ ಸರ್ಕಾರಕ್ಕೆ ಮಾಡಿದ ಉಲ್ಲೇಖಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಇ) "ಭವಿಷ್ಯ ನಿಧಿ" ಎಂದರೆ, ಯಾವ ನಿಧಿಯಲ್ಲಿ, ನಿಯೋಜಿತರ ಯಾವುದೇ ವರ್ಗ ಅಥವಾ ವರ್ಗಗಳ ಚಂದಾಗಳು ಅಥವಾ ಠೇವಣಿಗಳನ್ನು ಸ್ವೀಕರಿಸಲಾಗಿದೆಯೋ ಮತ್ತು ಅವರ ವೈಯಕ್ತಿಕ ಖಾತೆಗಳಲ್ಲಿ ಇಟ್ಟುಕೊಳ್ಳಲಾಗಿದೆಯೋ ಆ ನಿಧಿ ಮತ್ತು ಅದು ಯಾವುದೇ ವಂತಿಗೆಗಳನ್ನು

ಮತ್ತು ಆ ನಿಧಿಯ ನಿಯಮಗಳ ಮೇರೆಗೆ, ಅಂಥ ಚಂದಾಗಳು, ಠೇವಣಿಗಳು ಅಥವಾ ವಂತಿಗೆಗಳ ಮೇಲೆ ಒದಗಿಬಂದ ಯಾವುದೇ ಬಡ್ಡಿ ಅಥವಾ ವೃದ್ಧಿಯನ್ನು ಒಳಗೊಳ್ಳುತ್ತದೆ;

(ಎಫ್) "ರೈಲ್ವೆ ಆಡಳಿತ" ಎಂದರೆ:–

(i) ಯುನೈಟೆಡ್ ಕಿಂಗ್‌ಡಂನ ಸಂಸತ್ತಿನ ವಿಶೇಷ ಅಧಿನಿಯಮದ ಮೇರೆಗೆ ಆಗಲಿ ಅಥವಾ ಭಾರತದ ಕಾನೂನು ಮೇರೆಗೆ ಆಗಲಿ ಅಥವಾ ಸರ್ಕಾರದೊಂದಿಗೆ ಮಾಡಿಕೊಂಡ ಕರಾರಿನ ಮೇರೆಗೆ ಆಗಲಿ ಭಾರತದ ಯಾವುದೇ ಭಾಗದಲ್ಲಿ ರೈಲ್ವೆ ಅಥವಾ ಟ್ರಾಮ್‌ವೇ ಆಡಳಿತವನ್ನು ನಡೆಸುತ್ತಿರುವ ಯಾವುದೇ ಕಂಪನಿ; ಅಥವಾ

(ii) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಆಡಳಿತ ನಡೆಸುತ್ತಿರುವ ಯಾವುದೇ ರೈಲ್ವೆ ಅಥವಾ ಟ್ರಾಮ್‌ವೇನ ವ್ಯವಸ್ಥಾಪಕ ಮತ್ತು ಅದು (ii)ನೇ ಉಪಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಪ್ರಕರಣದಲ್ಲಿ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವನ್ನು ಒಳಗೊಳ್ಳುತ್ತದೆ;

(ಜಿ) "ರೈಲ್ವೆ ಭವಿಷ್ಯ ನಿಧಿ" ಎಂದರೆ, ರೈಲ್ವೆ ಆಡಳಿತದ ನಿಯೋಜಿತರ ಯಾವುದೇ ವರ್ಗ ಅಥವಾ ವರ್ಗಗಳಿಗಾಗಿ ಅದರ ಅಧಿಕಾರದ ಮೂಲಕ ಸ್ಥಾಪಿಸಿದ ಭವಿಷ್ಯ ನಿಧಿ.

**3. ಕಡ್ಡಾಯ ಠೇವಣಿಗಳ ಸಂರಕ್ಷಣೆ.–** (1) ಯಾವುದೇ ಸರ್ಕಾರದ ಅಥವಾ ರೈಲ್ವೆಯ ಭವಿಷ್ಯ ನಿಧಿಯಲ್ಲಿನ ಕಡ್ಡಾಯ ಠೇವಣಿಯು ಯಾವುದೇ ರೀತಿಯಲ್ಲಿ ಹಸ್ತಾಂತರಗೊಳ್ಳುವ ಅಥವಾ ಋಣಭಾರಕ್ಕೆ ಒಳಗಾಗುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದಲ್ಲ ಮತ್ತು ಚಂದಾದಾರನು ಅಥವಾ ಠೇವಣಿದಾರನು ವಹಿಸಿದ ಯಾವುದೇ ಋಣ ಅಥವಾ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್, ರೆವಿನ್ಯೂ ಅಥವಾ ಕ್ರಿಮಿನಲ್ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದ ಮೇರೆಗೆ ಜಪ್ತಿಗೆ ಗುರಿಯಾಗತಕ್ಕದ್ದಲ್ಲ ಮತ್ತು ಪ್ರಾಂತೀಯ ದಿವಾಳಿ ಅಧಿನಿಯಮ, 1920 (1920ರ 5)ರ ಮೇರೆಗೆ ನೇಮಕಗೊಂಡ ಅಫಿಶಿಯಲ್ ಅಸ್ಸೈನಿಯೇ ಆಗಲಿ ಅಥವಾ ಯಾವನೇ ರಿಸೀವರನೇ ಆಗಲಿ ಯಾವುದೇ ಅಂಥ ಕಡ್ಡಾಯ ಠೇವಣಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ ಅಥವಾ ಅದರ ಬಗ್ಗೆ ಯಾವುದೇ ಕ್ಲೇಮನ್ನು ಹೊಂದಿರತಕ್ಕದ್ದಲ್ಲ.

(2) ಅವನ ಮರಣದ ಕಾಲದಲ್ಲಿ ಯಾವುದೇ ಅಂಥ ನಿಧಿಯ ಚಂದಾದಾರನ ಅಥವಾ ಠೇವಣಿದಾರನ ಜಮೆಯಲ್ಲಿ ಇರುವ ಮತ್ತು ಆ ಚಂದಾದಾರ ಅಥವಾ ಠೇವಣಿದಾರನ ಯಾರೇ ಅವಲಂಬಿತನಿಗೆ ಅಥವಾ ಅವನ ಪರವಾಗಿ ಸಂದಾಯವನ್ನು ಸ್ವೀಕರಿಸಲು ಕಾನೂನಿನ ಮೂಲಕ

ಅಧಿಕೃತಗೊಳಿಸಬಹುದಾದಂಥ ವ್ಯಕ್ತಿಗೆ ಆ ನಿಧಿಯ ನಿಯಮಗಳ ಮೇರೆಗೆ ಸಂದಾಯಮಾಡಬೇಕಾದ ಯಾವುದೇ ಮೊತ್ತವು, ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಕಳೆತಕ್ಕೊಳಪಟ್ಟು ಮತ್ತು ಆ ಅವಲಂಬಿತನು, ಚಂದಾದಾರನ ಅಥವಾ ಠೇವಣಿದಾರನ ವಿಧವೆ ಅಥವಾ ಮಗುವಾಗಿದ್ದ ಹೊರತು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಮಾಡಿದ ಹಸ್ತಾಂತರದ ಮೇರೆಗೆ ಹಸ್ತಾಂತರ ಪಡೆದವನ ಹಕ್ಕುಗಳಿಗೂ ಒಳಪಟ್ಟು, ಅವಲಂಬಿತನಲ್ಲಿ ನಿಹಿತವಾಗತಕ್ಕದ್ದು ಮತ್ತು ಹಿಂದೆ ಹೇಳಿದುದಕ್ಕೆ ಒಳಪಟ್ಟು ಮೃತಪಟ್ಟವನು ವಹಿಸಿದ್ದ ಅಥವಾ ಚಂದಾದಾರ ಅಥವಾ ಠೇವಣಿದಾರನ ಮರಣಕ್ಕೆ ಮುಂಚೆ ಅವಲಂಬಿತನು ವಹಿಸಿದ್ದ ಯಾವುದೇ ಋಣ ಅಥವಾ ಇತರ ಹೊಣೆಗಾರಿಕೆಯಿಂದ ಮುಕ್ತವಾಗಿರತಕ್ಕದ್ದು.

**4. ಮರುಸಂದಾಯಗಳ ಬಗ್ಗೆ ಉಪಬಂಧಗಳು.–** (1) ಯಾವುದೇ ಸರ್ಕಾರಿ ಅಥವಾ ರೈಲ್ವೆ ಭವಿಷ್ಯ ನಿಧಿಯ ನಿಯಮಗಳ ಮೇರೆಗೆ, ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಕಳೆತವನ್ನು ಮಾಡಿದ ತರುವಾಯ ಯಾರೇ ಚಂದಾದಾರ ಅಥವಾ ಠೇವಣಿದಾರನ ಜಮೆಯಲ್ಲಿರುವ ಮೊತ್ತ ಅಥವಾ ಅದರ ಶಿಲ್ಕನ್ನು ಸಂದಾಯಮಾಡಬೇಕಾಗಿ ಬಂದಾಗ, ಸಂದಾಯ ಮಾಡುವ ಕರ್ತವ್ಯವನ್ನು ಹೊಂದಿರುವ ಅಧಿಕಾರಿಯು, ಸಂದರ್ಭಾನುಸಾರ ಆ ಮೊತ್ತ ಅಥವಾ ಶಿಲ್ಕನ್ನು ಚಂದಾದಾರನಿಗೆ ಅಥವಾ ಠೇವಣಿದಾರನಿಗೆ ಸಂದಾಯ ಮಾಡತಕ್ಕದ್ದು ಅಥವಾ ಅವನು ಮರಣಹೊಂದಿದ್ದರೆ,–

(ಎ) ಆ ಮೊತ್ತ ಅಥವಾ ಶಿಲ್ಕು ಅಥವಾ ಅದರ ಯಾವುದೇ ಭಾಗವು, 3ನೇ ಪ್ರಕರಣದ ಉಪಬಂಧಗಳ ಮೇರೆಗೆ ಅವಲಂಬಿತನಲ್ಲಿ ನಿಹಿತಗೊಳ್ಳುವುದಾದರೆ, ಅದನ್ನು ಅವಲಂಬಿತನಿಗೆ ಅಥವಾ ಅವನ ಪರವಾಗಿ ಸಂದಾಯವನ್ನು ಸ್ವೀಕರಿಸಲು ಕಾನೂನಿನ ಮೂಲಕ ಅಧಿಕೃತಗೊಳಿಸಬಹುದಾದಂಥ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು; ಅಥವಾ

(ಬಿ) ಸಂಧರ್ಭಾನುಸಾರ ಆ ಇಡೀ ಮೊತ್ತ ಅಥವಾ ಶಿಲ್ಕು, ಐದು ಸಾವಿರ ರೂಪಾಯಿಗಳನ್ನು ಮೀರದಿದ್ದರೆ, (ಎ) ಖಂಡದ ಮೇರೆಗೆ ಸಂದಾಯ ಮಾಡಲಾಗದಂಥ ಅದನ್ನು ಅಥವಾ ಅದರ ಯಾವುದೇ ಭಾಗವನ್ನು, ಆ ನಿಧಿಯ ನಿಯಮಗಳ ಮೇರೆಗೆ ಅದನ್ನು ಸ್ವೀಕರಿಸಲು ನಾಮ ನಿರ್ದೇಶಿತನಾದ ಯಾರೇ ವ್ಯಕ್ತಿಗೆ ಅಥವಾ ಯಾರೇ ವ್ಯಕ್ತಿಯನ್ನು, ಹಾಗೆ ನಾಮನಿರ್ದೇಶಿಸಲಾಗಿಲ್ಲದಿದ್ದರೆ, ಅದನ್ನು ಸ್ವೀಕರಿಸಲು ಅನ್ಯಥಾ ಹಕ್ಕುಳ್ಳವನೆಂದು ಅವನಿಗೆ ಕಂಡುಬರುವ ಯಾರೇ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು; ಅಥವಾ

(ಸಿ) (ಎ) ಅಥವಾ (ಬಿ) ಖಂಡದ ಮೇರೆಗೆ ಯಾರೇ ವ್ಯಕ್ತಿಗೆ ಸಂದಾಯ ಮಾಡಲಾಗದಂಥ ಯಾವುದೇ ಮೊತ್ತ ಅಥವಾ ಶಿಲ್ಕು ಅಥವಾ ಅದರ ಯಾವುದೇ ಭಾಗದ ಸಂದರ್ಭದಲ್ಲಿ ಅದನ್ನು,–

(i) ನಿಧಿಯ ನಿಯಮಗಳ ಮೇರೆಗೆ ಅದನ್ನು ಸ್ವೀಕರಿಸಲು ನಾಮನಿರ್ದೇಶಿತನಾದ ಯಾರೇ ವ್ಯಕ್ತಿಗೆ, ಅಂಥ ವ್ಯಕ್ತಿಯು, ಮರಣ ಹೊಂದಿದವನ ಸಂಪದದ ಬಗ್ಗೆ ಆಡಳಿತವನ್ನು ತನಗೆ ಕೊಟ್ಟಿರುವುದನ್ನು ಸಾಕ್ಷೀಕರಿಸುವ ಪ್ರೊಬೇಟ್ ಅಥವಾ ಆಡಳಿತಾಧಿಕಾರ ಪತ್ರವನ್ನು ಅಥವಾ ಅಂಥ ಮೊತ್ತ, ಶಿಲ್ಕು ಅಥವಾ ಭಾಗದ ಸಂದಾಯವನ್ನು ಸ್ವೀಕರಿಸಲು, ಅದರ ಪ್ರಮಾಣಪತ್ರ ಧಾರಕನನ್ನು ಹಕ್ಕುಳ್ಳವನನ್ನಾಗಿಸುವ, ಉತ್ತರಾಧಿಕಾರ ಪ್ರಮಾಣಪತ್ರ ಅಧಿನಿಯಮ, 1889* (1889ರ 7) ರ ಮೇರೆಗೆ ಅಥವಾ ಮುಂಬಯಿ ರೆಗ್ಯೂಲೇಷನ್ 1827ರ VIIIರ ಮೇರೆಗೆ ಕೊಡಲಾದ ಪ್ರಮಾಣಪತ್ರವನ್ನು ಅಂಥ ವ್ಯಕ್ತಿಯು ಹಾಜರುಪಡಿಸಿದ ಮೇಲೆ ಅವನಿಗೆ; ಅಥವಾ

(ii) ಯಾರೇ ವ್ಯಕ್ತಿಯನ್ನು ಹಾಗೆ ನಾಮನಿರ್ದೇಶನ ಮಾಡದೇ ಇರುವಲ್ಲಿ, ಅಂಥ ಪ್ರೊಬೇಟು, ಆಡಳಿತಾಧಿಕಾರ ಪತ್ರ ಅಥವಾ ಪ್ರಮಾಣಪತ್ರವನ್ನು ಹಾಜರುಪಡಿಸುವ ಯಾರೇ ವ್ಯಕ್ತಿಗೆ

–ಸಂದಾಯ ಮಾಡತಕ್ಕದ್ದು:

ಪರಂತು, ಚಂದಾದಾರ ಅಥವಾ ಠೇವಣಿದಾರನ ಜಮೆಯಲ್ಲಿರುವ ಯಾವುದೇ ಇಡೀ ಮೊತ್ತ ಅಥವಾ ಅದರ ಯಾವುದೇ ಭಾಗವನ್ನು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಯಾರೇ ಇತರ ವ್ಯಕ್ತಿಗೆ ಹಸ್ತಾಂತರಣ ಮಾಡಲಾಗಿರುವಲ್ಲಿ, ಮತ್ತು ಹಸ್ತಾಂತರ ಪಡೆದವನಿಂದ ಹಸ್ತಾಂತರಣದ ಬಗ್ಗೆ ಬರಹದಲ್ಲಿ ನೋಟೀಸನ್ನು ಅಧಿಕಾರಿಯು ಸ್ವೀಕರಿಸಿರುವಲ್ಲಿ, ಅಧಿಕಾರಿಯು, ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಕಳೆತವನ್ನು ಮತ್ತು ಆ ಚಂದಾದಾರ ಅಥವಾ ಠೇವಣಿದಾರನಿಗೆ ಅಥವಾ ಅವನ ವಿಧವೆ ಅಥವಾ ಮಗುವಿನ ಪರವಾಗಿ (ಎ) ಖಂಡದ ಮೇರೆಗೆ ಬಾಕಿಯಾದ ಯಾವುದೇ ಸಂದಾಯವನ್ನು ಮಾಡಿದ ತರುವಾಯ,–

(i) ಆ ಚಂದಾದಾರ ಅಥವಾ ಠೇವಣಿದಾರ ಅಥವಾ ಅವನು ಮರಣ ಹೊಂದಿದ್ದರೆ, ಯಾವುದೇ ಸಿಂಧುವಾದ ಹಸ್ತಾಂತರವು ಇಲ್ಲದಿರುವಲ್ಲಿ, ಈ ಉಪಪ್ರಕರಣದ ಮೇರೆಗೆ ಆ ಮೊತ್ತ ಅಥವಾ ಶಿಲ್ಕನ್ನು ಯಾವ ವ್ಯಕ್ತಿಗೆ ಸಂದಾಯ ಮಾಡಬೇಕಾಗಬಹುದೋ ಆ ವ್ಯಕ್ತಿಯು ಬರಹದಲ್ಲಿ

* ಈಗಿನ ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925ರ 39)ನ್ನು ನೋಡಿ

ಅವನ ಸಮ್ಮತಿಯನ್ನು ಕೊಟ್ಟರೆ ಸಂದರ್ಭಾನುಸಾರ, ಆ ಮೊತ್ತ ಅಥವಾ ಅದರ ಭಾಗವನ್ನು ಅಥವಾ ಶಿಲ್ಕನ್ನು ಹಸ್ತಾಂತರಣ ಪಡೆದವನಿಗೆ ಸಂದಾಯ ಮಾಡತಕ್ಕದ್ದು, ಅಥವಾ

(ii) ಅಂಥ ಸಮ್ಮತಿಯು ಇಲ್ಲದೇ ಇದ್ದರೆ, ಅದನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಯ ಬಗ್ಗೆ ಸಕ್ಷಮ ಸಿವಿಲ್ ನ್ಯಾಯಾಲಯದ ತೀರ್ಮಾನವು ಬರುವವರೆಗೆ, ಸಂದರ್ಭಾನುಸಾರ ಆ ಮೊತ್ತ ಅಥವಾ ಅದರ ಭಾಗ ಅಥವಾ ಸಿಲ್ಕಿನ ಸಂದಾಯವನ್ನು ತಡೆಹಿಡಿಯತಕ್ಕದ್ದು.

(2) ಉಪಪ್ರಕರಣ (1)ರ ಮೂಲಕ ಅಧಿಕೃತಗೊಳಿಸಿದ ಯಾವುದೇ ಸಂದಾಯವನ್ನು ಮಾಡುವುದು, ಚಂದಾದಾರ ಅಥವಾ ಠೇವಣಿದಾರನ ಜಮೆಯಲ್ಲಿರುವ ಅಂಥ ಮೊತ್ತವು ಹಾಗೆ ಸಂದಾಯ ಮಾಡಿದ ಮೊಬಲಗಿಗೆ ಸಮಾನವಾಗಿರುವಷ್ಟರ ಮಟ್ಟಿಗೆ, ಅದಕ್ಕೆ ಸಂಬಂಧಿಸಿದಂತೆ ಸಂದರ್ಭಾನುಸಾರ ಸರ್ಕಾರ ಅಥವಾ ರೈಲ್ವೆ ಆಡಳಿತವನ್ನು ಎಲ್ಲ ಹೊಣೆಗಾರಿಕೆಯಿಂದ ಪೂರ್ಣವಾಗಿ ವಿಮೋಚನೆಗೊಳಿಸತಕ್ಕದ್ದು.

**5. ನಾಮನಿರ್ದೇಶಿತರ ಹಕ್ಕುಗಳು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಆ ನಿಧಿಯ ನಿಯಮಗಳಿಗೆ ಅನುಸಾರವಾಗಿ ಕ್ರಮಬದ್ಧವಾಗಿ ಮಾಡಿದ ಯಾವುದೇ ನಾಮ ನಿರ್ದೇಶನವು, ಯಾರೇ ವ್ಯಕ್ತಿಗೆ ಆ ಮೊತ್ತವನ್ನು ಸಂದಾಯ ಮಾಡಬೇಕಾಗುವುದಕ್ಕೆ ಮುಂಚೆ ಅದನ್ನು ಸಂದಾಯ ಮಾಡಬೇಕಾಗಿದ್ದು ಆ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಮುಂಚೆ ಸಂಭವಿಸುವ ಚಂದಾದಾರ ಅಥವಾ ಠೇವಣಿದಾರನ ಮರಣದ ನಂತರ ಅಂಥ ಇಡೀ ಮೊತ್ತ ಅಥವಾ ಅದರ ಯಾವುದೇ ಭಾಗವನ್ನು ಸ್ವೀಕರಿಸಲು ಯಾರೇ ವ್ಯಕ್ತಿಗೆ ಹಕ್ಕನ್ನು ಪ್ರದಾನ ಮಾಡುವುದೆಂದು ತಾತ್ಪರ್ಯವಾಗುವಲ್ಲಿ ಸದರಿ ವ್ಯಕ್ತಿಯು, ಹಿಂದೆ ಹೇಳಿದಂತೆ ಆ ಚಂದಾದಾರ ಅಥವಾ ಠೇವಣಿದಾರನ ಮರಣದ ತರುವಾಯ ಎಲ್ಲಾ ಇತರ ವ್ಯಕ್ತಿಗಳನ್ನು ಹೊರತುಪಡಿಸಿ ಸಂದರ್ಭಾನುಸಾರ ಅಂಥ ಮೊತ್ತ ಅಥವಾ ಅದರ ಭಾಗವನ್ನು,–

(ಎ) ಅಂಥ ನಾಮನಿರ್ದೇಶನವನ್ನು, ಅದೇ ರೀತಿಯಲ್ಲಿ ಮಾಡಿದ ಇನ್ನೊಂದು ನಾಮನಿರ್ದೇಶನದ ಮೂಲಕ ಯಾವುದೇ ಕಾಲದಲ್ಲಿ ವ್ಯತ್ಯಾಸಗೊಳಿಸಿದ್ದ ಅಥವಾ ಆ ನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ ಮತ್ತು ಪ್ರಾಧಿಕಾರಿಗೆ ಕೊಟ್ಟ ನೋಟೀಸಿನ ಮೂಲಕ ಸರ್ಕಾರೀ ಅಥವಾ ರೈಲ್ವೆ ಭವಿಷ್ಯ ನಿಧಿಯ ಚಂದಾದಾರನು ಅಥವಾ ಠೇವಣಿದಾರನು ಆ ನಿಧಿಯಲ್ಲಿನ ತನ್ನ ಜಮೆಯಲ್ಲಿರುವ ಮೊತ್ತದ ಬಗ್ಗೆ ಅಥವಾ ಅದರ ಯಾವುದೇ ಭಾಗದ ಬಗ್ಗೆ ಮಾಡಿರುವ ಮರಣ ಶಾಸನ ಅಥವಾ ಅನ್ಯಥಾ ಆಗಿರುವ ವಿಲೆಯ ಏರ್ಪಾಟಿದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸ್ಪಷ್ಟವಾಗಿ ರದ್ದುಗೊಳಿಸಿದ್ದ ಹೊರತು; ಅಥವಾ

(ಬಿ) ಅಂಥ ನಾಮನಿರ್ದೇಶನವು, ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಆಕಸ್ಮಿಕತೆಯು ಸಂಭವಿಸುವ ಕಾರಣದಿಂದಾಗಿ ಯಾವುದೇ ಕಾಲದಲ್ಲಿ ಅಸಿಂಧುವಾದ ಹೊರತು

–ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಸದರಿ ವ್ಯಕ್ತಿಯು, ಚಂದಾದಾರ ಅಥವಾ ಠೇವಣಿದಾರನಿಗೆ ಮುಂಚೆ ಮೃತನಾದರೆ, ಆ ನಾಮನಿರ್ದೇಶನವು, ಸದರಿ ವ್ಯಕ್ತಿಗೆ ಪ್ರದಾನ ಮಾಡಿದ ಹಕ್ಕಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಶೂನ್ಯವಾಗಿರತಕ್ಕದ್ದು ಮತ್ತು ಯಾವುದೇ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ:

ಪರಂತು, ಮೃತ ವ್ಯಕ್ತಿಗೆ ಬದಲು, ಅಂಥ ಹಕ್ಕನ್ನು ಯಾರೇ ಇತರ ವ್ಯಕ್ತಿಗೆ ಪ್ರದಾನ ಮಾಡಿ ನಿಧಿಯ ನಿಯಮಗಳಿಗೆ ಅನುಸಾರವಾಗಿ ನಾಮನಿದೇಶನದಲ್ಲಿ ವ್ಯವಸ್ಥೆಯನ್ನು ಕ್ರಮಬದ್ಧವಾಗಿ ಮಾಡಿರುವಲ್ಲಿ, ಅಂಥ ಹಕ್ಕು, ಹಿಂದೆ ಹೇಳಿದಂತೆ ಸದರಿ ವ್ಯಕ್ತಿಯು ಮರಣ ಹೊಂದಿದ ಮೇಲೆ ಅಂಥ ಇತರ ವ್ಯಕ್ತಿಗೆ ಹೋಗತಕ್ಕದ್ದು.

(2) ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925ರ 39) ಅಥವಾ ಮುಂಬಯಿ ರೆಗ್ಯೂಲೇಷನ್, 1827ರ VIII ಇದರಲ್ಲಿ ಏನೇ ಅಡಕವಾಗಿದ್ದಾಗ್ಯೂ ಮೇಲೆ ಹೇಳಿದಂತೆ ಹಕ್ಕುದಾರನಾಗುವ ಯಾರೇ ವ್ಯಕ್ತಿಗೆ, ಅಂಥ ಮೊತ್ತ ಅಥವಾ ಅದರ ಭಾಗದ ಸಂದಾಯವನ್ನು ಸ್ವೀಕರಿಸಲು ಅವನನ್ನು ಹಕ್ಕುಳ್ಳವನನ್ನಾಗಿಸುವ, ಸಂದರ್ಭಾನುಸಾರ ಆ ಅಧಿನಿಯಮ ಅಥವಾ ಆ ರೆಗ್ಯೂಲೇಷನ್ನಿನ ಮೇರೆಗೆ ಒಂದು ಪ್ರಮಾಣಪತ್ರವನ್ನು ಕೊಡಬಹುದು ಮತ್ತು ಅಂಥ ಪ್ರಮಾಣಪತ್ರವನ್ನು, ಮೃತನ ಸಂಪದಕ್ಕೆ ಸಂಬಂಧಿಸಿದಂತೆ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಯಾರೇ ಇತರ ವ್ಯಕ್ತಿಗೆ ಅದನ್ನು ಕೊಡುವ ಮೂಲಕ ಅಸಿಂಧುಗೊಳಿಸಲಾಗಿದೆ ಅಥವಾ ರದ್ದುಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದಲ್ಲ.

(3) ಭವಿಷ್ಯ ನಿಧಿ (ತಿದ್ದುಪಡಿ) ಅಧಿನಿಯಮ, 1946 (1946ರ 11) ರ 2ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ತಿದ್ದುಪಡಿಯಾದ, ಈ ಪ್ರಕರಣದ ಉಪಬಂಧಗಳು ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮುಂಚೆ ಮಾಡಿದಂಥ ಎಲ್ಲಾ ನಾಮನಿರ್ದೇಶನಗಳಿಗೂ ಸಹ ಅನ್ವಯವಾಗತಕ್ಕದ್ದು:

ಪರಂತು, ಹಾಗೆ ತಿದ್ದುಪಡಿಯಾದ ಈ ಪ್ರಕರಣದ ಉಪಬಂಧಗಳು, ಯಾವ ಪ್ರಕರಣದಲ್ಲಿ ಸದರಿ ದಿನಾಂಕಕ್ಕೆ ಮುಂಚೆ ಯಾವುದೇ ಮೊತ್ತವನ್ನು ಸಂದಾಯ ಮಾಡಲಾಗಿದೆಯೋ ಅಥವಾ ಆ ನಿಯಮಗಳಿಗೆ ಅನುಸಾರವಾಗಿ ಕ್ರಮಬದ್ಧವಾಗಿ ಮಾಡಿದ ಯಾವುದೇ ನಾಮನಿರ್ದೇಶನವನ್ನು ಅನುಸರಿಸಿ ಆ ನಿಧಿಯ ನಿಯಮಗಳ ಮೇರೆಗೆ ಸಂದಾಯ ಮಾಡಬೇಕಾಗಿರುವುದೋ, ಆ ಯಾವುದೇ ಪ್ರಕರಣಕ್ಕೆ ಬಾಧಕವಾಗುವಂತೆ ಪ್ರವರ್ತಿಸತಕ್ಕದ್ದಲ್ಲ.

**6. ಕಳೆತಗಳನ್ನು ಮಾಡುವ ಅಧಿಕಾರ.–** ವಂತಿಗೆ ಭವಿಷ್ಯ ನಿಧಿಯಾಗಿರುವ ಸರ್ಕಾರಿ ಅಥವಾ ರೈಲ್ವೆ ಭವಿಷ್ಯನಿಧಿಯಲ್ಲಿ ಯಾರೇ ಚಂದಾದಾರ ಅಥವಾ ಠೇವಣಿದಾರನ ಜಮೆಯಲ್ಲಿರುವ ಮೊತ್ತವು ಸಂದಾಯವಾಗಬೇಕಾದಾಗ, ಆ ನಿಧಿಯ ನಿಯಮಗಳಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಹಾಗೆ ನಿರ್ದೇಶಿಸಿದರೆ,–

(ಎ) ಸರ್ಕಾರಕ್ಕೆ ಅಥವಾ ರೈಲ್ವೆ ಆಡಳಿತಕ್ಕೆ ಚಂದಾದಾರ ಅಥವಾ ಠೇವಣಿದಾರನು ವಹಿಸಿದ ಹೊಣೆಗಾರಿಕೆಯ ಮೇರೆಗೆ ಬಾಕಿಯಾದ, ಆದರೆ ಯಾವುದೇ ಸಂದರ್ಭದಲ್ಲಿ ಚಂದಾದಾರ ಅಥವಾ ಠೇವಣಿದಾರನ ಲೆಕ್ಕಕ್ಕೆ ಜಮೆ ಮಾಡಿದ ಯಾವುದೇ ವಂತಿಗೆಗಳ ಒಟ್ಟು ಮೊಬಲಗು ಮತ್ತು ಅಂಥ ವಂತಿಗೆಗಳ ಮೇಲೆ ಒದಗಿಬಂದಂಥ ಯಾವುದೇ ಬಡ್ಡಿ ಅಥವಾ ವೃದ್ಧಿಯ ಒಟ್ಟು ಮೊಬಲಗನ್ನು ಮೀರದ ಯಾವುದೇ ಮೊಬಲಗು; ಅಥವಾ

(ಬಿ) ಚಂದಾದಾರ ಅಥವಾ ಠೇವಣಿದಾರನನ್ನು, ನಿಧಿಯ ನಿಯಮಗಳಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಿದ ಯಾವುದೇ ಕಾರಣಗಳಿಗಾಗಿ ಆತನನ್ನು ನಿಯೋಜನೆಯಿಂದ ವಜಾಮಾಡಲಾಗಿರುವಲ್ಲಿ ಅಥವಾ ನಿಯೋಜನೆಯು ಪ್ರಾರಂಭವಾದ ಐದು ವರ್ಷಗಳೊಳಗೆ ಅಂಥ ನಿಯೋಜನೆಗೆ ಅವನು ರಾಜೀನಾಮೆಯನ್ನು ಕೊಟ್ಟಿರುವಲ್ಲಿ, ಯಾವುದೇ ಅಂಥ ವಂತಿಗೆಗಳು, ಬಡ್ಡಿ ಮತ್ತು ವೃದ್ಧಿಯ ಇಡೀ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಅದರಿಂದ ಕಳೆಯತಕ್ಕದ್ದು ಮತ್ತು ಅದನ್ನು ಸಂದರ್ಭಾನುಸಾರ ಸರ್ಕಾರ ಅಥವಾ ರೈಲ್ವೆ ಆಡಳಿತಕ್ಕೆ ಸಂದಾಯ ಮಾಡತಕ್ಕದ್ದು.

**6ಎ. ಕೇಂದ್ರ ಸರ್ಕಾರದ ಅಧಿಕಾರಿಗಳು ನಿವೃತ್ತರಾದ ಎರಡು ವರ್ಷಗಳೊಳಗೆ ವಾಣಿಜ್ಯ ನಿಯೋಜನೆಯನ್ನು ಪೂರ್ವ ಅನುಮತಿ ಇಲ್ಲದೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಸರ್ಕಾರಿ ವಂತಿಗೆಗಳನ್ನು ತಡೆಹಿಡಿಯುವುದು ಅಥವಾ ಅವುಗಳ ವಸೂಲಿ.–** (1) ಈ ಪ್ರಕರಣದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಕೇಂದ್ರ ಸರ್ಕಾರದ ಅಧಿಕಾರಿ" ಎಂದರೆ, ಅವನು ನಿವೃತ್ತನಾಗುವುದಕ್ಕೆ ನಿಕಟ ಪೂರ್ವದಲ್ಲಿ, ಕೇಂದ್ರ ಸೇವೆ 1ನೇ ವರ್ಗದ ಸದಸ್ಯನಾಗಿರುವ, ಕೇಂದ್ರ ಸರ್ಕಾರವು ರಚಿಸಿದ ವಂತಿಗೆ ಭವಿಷ್ಯ ನಿಧಿಯ ಚಂದಾದಾರ ಅಥವಾ ಅವರಲ್ಲಿನ ಠೇವಣಿದಾರ, ಆದರೆ ಅದು ನಿರ್ದಿಷ್ಟ ಅವಧಿಗಾಗಿ ಸೇವಾ ಕರಾರಿನ ಮೇರೆಗೆ ನೇಮಕಗೊಂಡ ಅಧಿಕಾರಿಯನ್ನು ಒಳಗೊಳ್ಳುವುದಿಲ್ಲ;

(ಬಿ) "ವಾಣಿಜ್ಯ ನಿಯೋಜನೆ" ಎಂದರೆ, ಯಾವುದೇ ಕಂಪನಿ, ಸಹಕಾರ ಸಂಘ, ಫರ್ಮಿನ ಅಧೀನದಲ್ಲಿನ ಯಾವುದೇ ನಾತೆಯಲ್ಲಿನ (ಏಜೆಂಟನನ್ನೂ ಒಳಗೊಂಡು) ನಿಯೋಜನೆ ಅಥವಾ ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಹಣಕಾಸು ಅಥವಾ ವೃತ್ತಿ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿ ಮತ್ತು ಅದು,–

(i) ಕಂಪನಿಯ ನಿರ್ದೇಶಕತ್ವ;

(ii) ಸಹಕಾರಿ ಸಂಘದಲ್ಲಿ ಯಾವುದೇ ಹೆಸರಿನಲ್ಲಿ ಕರೆದ ಚುನಾಯಿತನಾದ ಅಥವಾ ಅನ್ಯಥಾ ಅಧ್ಯಕ್ಷ, ಸಭಾಪತಿ, ವ್ಯವಸ್ಥಾಪಕ, ಕಾರ್ಯದರ್ಶಿ, ಖಜಾಂಚಿಯಂಥ ಯಾವುದೇ ಪದವನ್ನು ಧಾರಣ ಮಾಡುವುದನ್ನು; ಮತ್ತು

(iii) ಯಾವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅಧಿಕಾರಿಯು,–

(ಎ) ಯಾವುದೇ ವೃತ್ತಿ ಅರ್ಹತೆಯನ್ನು ಹೊಂದಿರುವುದಿಲ್ಲವೋ ಮತ್ತು ಯಾವುದಕ್ಕೆ ಸಂಬಂಧಿಸಿದಂತೆ ವೃತ್ತಿಯನ್ನು ಪ್ರಾರಂಭಿಸಬೇಕಾಗಿದೆಯೋ ಅಥವಾ ನಡೆಸಲಾಗುತ್ತಿದೆಯೋ ಆ ವಿಷಯಗಳು ಅವನ ಪದೀಯ ಜ್ಞಾನ ಅಥವಾ ಅನುಭವಕ್ಕೆ ಸಂಬಂಧಪಡುವಂತಹುದಾಗಿದೆಯೋ; ಅಥವಾ

(ಬಿ) ವೃತ್ತಿಯ ಅರ್ಹತೆಗಳನ್ನು ಹೊಂದಿದ್ದು ಆದರೆ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಅಂಥ ವೃತ್ತಿಯನ್ನು ಪ್ರಾರಂಭಿಸಬೇಕಾಗಿರುವುದೋ ಆ ವಿಷಯಗಳು, ಕೇಂದ್ರ ಸರ್ಕಾರದ ಅಧೀನದಲ್ಲಿ ಅವನು ಧಾರಣಮಾಡಿದ್ದ ಹುದ್ದೆಗಳ ಕಾರಣದಿಂದಾಗಿ ಅವನ ಕಕ್ಷಿದಾರರಿಗೆ ಅನುಚಿತ ಲಾಭವನ್ನು ಕೊಡುವ ಸಂಭವವಿರುವಂಥವುಗಳು ಆಗಿರುವುವೋ; ಅಥವಾ

(ಸಿ) ಕೇಂದ್ರ ಸರ್ಕಾರದ ಕಚೇರಿಗಳೊಂದಿಗೆ ಅಥವ ಅಧಿಕಾರಿಗಳೊಂದಿಗೆ ಸಂಪರ್ಕ ಅಥವಾ ಸಂಬಂಧವನ್ನು ಒಳಗೊಳ್ಳುವ ಕಾರ್ಯವನ್ನು ಕೈಗೊಳ್ಳಬೇಕಾಗಿರುವುದೋ

– ಆ ವಿಷಯಗಳ ಸಲಹೆಗಾರನಾಗಿ ಅಥವಾ ಸಮಾಲೋಚಕನಾಗಿ, ಸ್ವತಂತ್ರವಾಗಿಯೇ ಆಗಲಿ ಅಥವಾ ಫರ್ಮಿನ ಪಾಲುದಾರನಾಗಿಯೇ ಆಗಲಿ ವೃತ್ತಿಯನ್ನು ಪ್ರಾರಂಭಿಸುವುದು– ಇವುಗಳನ್ನು ಸಹ ಒಳಗೊಳ್ಳುತ್ತವೆ. ಆದರೆ, ಸರ್ಕಾರವು ಸಂಪೂರ್ಣವಾಗಿ ಅಥವಾ ಗಮನಾರ್ಹವಾಗಿ ಒಡೆತನ

ಹೊಂದಿರುವ ಅಥವಾ ನಿಯಂತ್ರಣವನ್ನು ಹೊಂದಿರುವ ನಿಗಮ ಅಥವಾ ಕಂಪನಿಯಲ್ಲಿನ ಅಥವಾ ಅದರ ಅಧೀನದಲ್ಲಿನ ನಿಯೋಜನೆಯನ್ನು ಅಥವಾ ಸರ್ಕಾರವು ಪೂರ್ಣವಾಗಿ ಅಥವಾ ಗಮನಾರ್ಹವಾಗಿ ನಿಯಂತ್ರಣವನ್ನು ಹೊಂದಿರುವ ಅಥವಾ ಹಣಕಾಸು ಒದಗಿಸುವ ನಿಕಾಯದಲ್ಲಿನ ಅಥವಾ ಅದರ ಅಧೀನದಲ್ಲಿನ ನಿಯೋಜನೆಯನ್ನು ಒಳಗೊಳ್ಳುವುದಿಲ್ಲ;

(ಸಿ) "ಸರ್ಕಾರಿ ವಂತಿಗೆಗಳು" ಎಂದರೆ, ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, 1914 (1914ರ 9) ರ ಅರ್ಥವ್ಯಾಪ್ತಿಯೊಳಗೆ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು, ಭವಿಷ್ಯ ನಿಧಿಗಳ (ತಿದ್ದುಪಡಿ) ಅಧಿನಿಯಮ, 1975 (1975ರ 46)ರ ಪ್ರಾರಂಭದ ತರುವಾಯ, ಅಂಥ ಪ್ರಾರಂಭದ ತರುವಾಯದ ಯಾವುದೇ ಅವಧಿಗೆ ಸಂಬಂಧಿಸಿದಂತೆ ಕೊಟ್ಟ ವಂತಿಗೆಗಳು;

(ಡಿ) "ನಿಯಮಿಸಲಾದುದು" ಎಂದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರಚಿಸಿದ ನಿಯಮಗಳ ಮೂಲಕ ನಿಯಮಿಸಿದುದು.

(2) ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯು, ಕೇಂದ್ರ ಸರ್ಕಾರದ ಪೂರ್ವಾನುಮತಿಯಿಲ್ಲದೆ, ಅವನ ನಿವೃತ್ತಿಯ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ, ಅವನು ವಾಣಿಜ್ಯ ನಿಯೋಜನೆಯನ್ನು ತೆಗೆದುಕೊಂಡರೆ, ಯಾವುದೇ ಸಂದರ್ಭದಲ್ಲಿ ವಂತಿಗೆ ಭವಿಷ್ಯ ನಿಧಿಯಲ್ಲಿ ಅವನ ಜಮೆಗೆ ಮಾಡಿದ ಸರ್ಕಾರಿ ವಂತಿಗೆಗಳಿಗೆ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲ.

ವಿವರಣೆ.–1. ಈ ಉಪಪ್ರಕರಣ ಮತ್ತು (7)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರದ ಅಧೀನದಲ್ಲಿ ಅದೇ ಹುದ್ದೆಯಲ್ಲಿ ಅಥವಾ ಯಾವುದೇ ಇತರ 1ನೇ ದರ್ಜೆಯ ಹುದ್ದೆಯಲ್ಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿನ ಯಾವುದೇ ಇತರ ಸಮಾನವಾದ ಹುದ್ದೆಯಲ್ಲಿ ಯಾವುದೇ ಭಂಗವಿಲ್ಲದೆ, ನಿವೃತ್ತಿಯ ತರುವಾಯ ಮರು ನಿಯೋಜಿತನಾದ ಕೇಂದ್ರ ಸರ್ಕಾರದ ಅಧಿಕಾರಿಗೆ ಸಂಬಂಧಪಟ್ಟಂತೆ, "ನಿವೃತ್ತಿಯ ದಿನಾಂಕ" ಎಂದರೆ ಅಂಥ ಕೇಂದ್ರ ಸರ್ಕಾರದ ಅಧಿಕಾರಿಯು ಸರ್ಕಾರಿ ಸೇವೆಯಲ್ಲಿ ಮರು ನಿಯೋಜಿತನಾಗಿರುವುದು ಅಂತಿಮವಾಗಿ ಯಾವ ದಿನಾಂಕದಂದು ನಿಂತು ಹೋಗುವುದೋ ಆ ದಿನಾಂಕ.

ವಿವರಣೆ.–2. ಅವನ ನಿವೃತ್ತಿ ಪೂರ್ವದ ರಜೆಯ ಅವಧಿಯಲ್ಲಿ ನಿರ್ದಿಷ್ಟ ವಾಣಿಜ್ಯ ನಿಯೋಜನೆಯನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರವು ಅನುಮತಿಸಿದ ಕೇಂದ್ರ ಸರ್ಕಾರದ

ಅಧಿಕಾರಿಯನ್ನು ಈ ಉಪಪ್ರಕರಣದ ಉದ್ದೇಶಗಳಿಗಾಗಿ, ನಿವೃತ್ತಿಯ ತರುವಾಯ ಅಂಥ ನಿಯೋಜನೆಯಲ್ಲಿ ಅವನ ಮುಂದುವರಿಕೆಗಾಗಿ ಕೇಂದ್ರ ಸರ್ಕಾರದ ಪೂರ್ಣ ಅನುಮತಿಯನ್ನು ಪಡೆದಿರುವುದಾಗಿ ಭಾವಿಸತಕ್ಕದ್ದು.

(3) ಉಪಪ್ರಕರಣ (4)ರ ಉಪಬಂಧಗಳಿಗೊಳಪಟ್ಟು, ಕೇಂದ್ರ ಸರ್ಕಾರವು, ಕೇಂದ್ರ ಸರ್ಕಾರದ ಅಧಿಕಾರಿಯು, ನಿಯಮಿಸಲಾದ ನಮೂನೆಯಲ್ಲಿ ಮಾಡಿಕೊಂಡ ಅರ್ಜಿಯ ಮೇಲೆ ಬರಹದಲ್ಲಿನ ಆದೇಶದ ಮೂಲಕ ಅದು ಅವಶ್ಯವೆಂದು ಭಾವಿಸಬಹುದಾದಂಥ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ವಾಣಿಜ್ಯ ನಿಯೋಜನೆಯನ್ನು ತೆಗೆದುಕೊಳ್ಳಲು ಅಂಥ ಅಧಿಕಾರಿಗೆ ಅನುಮತಿ ಕೊಡಬಹುದು ಅಥವಾ ಆ ಆದೇಶದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅನುಮತಿಯನ್ನು ನಿರಾಕರಿಸಬಹುದು.

(4) ಯಾವುದೇ ವಾಣಿಜ್ಯ ನಿಯೋಜನೆಯನ್ನು ತೆಗೆದುಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರದ ಅಧಿಕಾರಿಗೆ ಈ ಪ್ರಕರಣದ ಮೇರೆಗೆ ಅನುಮತಿಯನ್ನು ಕೊಡುವಲ್ಲಿ ಅಥವಾ ನಿರಾಕರಿಸುವಲ್ಲಿ, ಕೇಂದ್ರ ಸರ್ಕಾರವು ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು, ಎಂದರೆ:–

(ಎ) ತೆಗೆದುಕೊಳ್ಳಲು ಉದ್ದೇಶಿಸಿದ ನಿಯೋಜನೆಯ ಸ್ವರೂಪ ಮತ್ತು ನಿಯೋಜಕನ ಪೂರ್ವ ವೃತ್ತಾಂತಗಳು;

(ಬಿ) ಅವನು ತೆಗೆದುಕೊಳ್ಳಲು ಉದ್ದೇಶಿಸಿದ ನಿಯೋಜನೆಯಲ್ಲಿನ ಅವನ ಕರ್ತವ್ಯಗಳು ಅವನನ್ನು ಸರ್ಕಾರದೊಂದಿಗೆ ಸಂಘರ್ಷಕ್ಕೆ ತೊಡಗಿಸುವಂಥವೋ ಹೇಗೆ;

(ಸಿ) ಅಧಿಕಾರಿಯು ಸೇವೆಯಲ್ಲಿದ್ದಾಗ, ಯಾವ ನಿಯೋಜಕನ ಅಧೀನದಲ್ಲಿ, ಅವನು ನಿಯೋಜನೆಯನ್ನು ಕೋರಲು ಉದ್ದೇಶಿಸಿರುವನೋ ಆ ನಿಯೋಜಕನೊಂದಿಗೆ, ಅಂಥ ಅಧಿಕಾರಿಯು ಅಂಥ ನಿಯೋಜಕನಿಗೆ ಅನುಗ್ರಹವನ್ನು ತೋರಿಸಿದ್ದಾನೆ ಎಂಬ ಬಗ್ಗೆ ಸಂಶಯಪಡಲು ಯುಕ್ತ ಆಧಾರಗಳನ್ನು ಒದಗಿಸುವಂಥ ಯಾವುದೇ ವ್ಯವಹಾರವನ್ನು ಹೊಂದಿದ್ದನೋ ಹೇಗೆ;

(ಡಿ) ನಿಯಮಿಸಬಹುದಾದಂಥ ಯಾವುದೇ ಇತರ ಸಂಬಂಧಪಟ್ಟ ಅಂಶಗಳು.

(5) ಉಪಪ್ರಕರಣ (3)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ದಿನಾಂದಿಂದ ಅರವತ್ತು ದಿವಸಗಳ ಅವಧಿಯೊಳಗೆ ಕೇಂದ್ರ ಸರ್ಕಾರವು, ಕೋರಲಾದ ಅನುಮತಿಯನ್ನು ಕೊಡಲು ನಿರಾಕರಿಸದೇ ಇರುವಲ್ಲಿ

ಅಥವಾ ಅರ್ಜಿದಾರನಿಗೆ ನಿರಾಕರಣೆಯನ್ನು ತಿಳಿಸದೆ ಇರುವಲ್ಲಿ, ಕೇಂದ್ರ ಸರ್ಕಾರವು ಕೋರಲಾದ ಅನುಮತಿಯನ್ನು ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

(6) ಕೇಂದ್ರ ಸರ್ಕಾರವು, ಯಾವುದೇ ಷರತ್ತುಗಳಿಗೆ ಒಳಪಟ್ಟು, ಕೋರಲಾದ ಅನುಮತಿಯನ್ನು ಕೊಡುವಲ್ಲಿ ಅಥವಾ ಅಂಥ ಅನುಮತಿಯನ್ನು ನಿರಾಕರಿಸುವಲ್ಲಿ ಅರ್ಜಿದಾರನು, ಆ ಬಗ್ಗೆ ಕೇಂದ್ರ ಸರ್ಕಾರದ ಆದೇಶವನ್ನು ಸ್ವೀಕರಿಸಿದ ಮೂವತ್ತು ದಿವಸಗಳೊಳಗೆ ಯಾವುದೇ ಅಂಥ ಷರತ್ತು ಅಥವಾ ನಿರಾಕರಣೆಯ ವಿರುದ್ಧ ಮನವಿಯನ್ನು ಮಾಡಿಕೊಳ್ಳಬಹುದು ಮತ್ತು ಕೇಂದ್ರ ಸರ್ಕಾರವು, ಆ ಬಗ್ಗೆ ಅದು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಅಂಥ ಷರತ್ತುಗಳನ್ನು ರದ್ದುಗೊಳಿಸುವ ಅಥವಾ ಯಾವುದೇ ಷರತ್ತುಗಳಿಲ್ಲದೆ ಅಂಥ ಅನುಮತಿಯನ್ನು ಕೊಡುವ ಆದೇಶವನ್ನು ಹೊರತುಪಡಿಸಿ, ಯಾವುದೇ ಆದೇಶವನ್ನು ಮಾಡಲು ಉದ್ದೇಶಿಸಿದ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಮನವಿಯನ್ನು ಸಲ್ಲಿಸಿದ ವ್ಯಕ್ತಿಗೆ ಅವಕಾಶವನ್ನು ಕೊಟ್ಟ ಹೊರತು, ಈ ಪ್ರಕರಣದ ಮೇರೆಗೆ ಮಾಡತಕ್ಕದ್ದಲ್ಲ.

(7) ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯು, ಕೇಂದ್ರ ಸರ್ಕಾರದ ಪೂರ್ವಾನುಮತಿಯಿಲ್ಲದೆ ಅವನು ನಿವೃತ್ತಿ ಹೊಂದಿದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಯಾವುದೇ ವಾಣಿಜ್ಯ ನಿಯೋಜನೆಯನ್ನು ತೆಗೆದುಕೊಂಡರೆ ಅಥವಾ ಯಾವುದೇ ವಾಣಿಜ್ಯ ನಿಯೋಜನೆಯನ್ನು ತೆಗೆದುಕೊಳ್ಳಲು ಯಾವ ಷರತ್ತಿಗೆ ಒಳಪಟ್ಟು ಈ ಪ್ರಕರಣದ ಮೇರೆಗೆ ಅವನಿಗೆ ಅನುಮತಿಯನ್ನು ಕೊಡಲಾಗಿದೆಯೋ ಆ ಯಾವುದೇ ಷರತ್ತಿನ ಭಂಗ ಮಾಡಿದರೆ ಬರಹದಲ್ಲಿನ ಆದೇಶದ ಮೂಲಕ ಮತ್ತು ಅದರಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗೆ ಸಂಬಂಧಪಟ್ಟಂತೆ ಮಾಡಿದ ಸರ್ಕಾರಿ ವಂತಿಗೆಗಳ ಅಂಥ ಭಾಗಕ್ಕೆ ಅವನು ಹಕ್ಕುಳ್ಳವನಾಗಿರತಕ್ಕದ್ದಲ್ಲ ಎಂದು ಘೋಷಿಸುವುದು ಮತ್ತು ಅವನು ಅದರ ಸಂದಾಯವನ್ನು ಸ್ವೀಕರಿಸಿದ್ದರೆ, ಅವನು ಸರ್ಕಾರಿ ವಂತಿಗೆಗಳ ಅಂಥ ಭಾಗಕ್ಕೆ ಸಮನಾದ ಮೊಬಲಗುಗಳನ್ನು ಕೇಂದ್ರ ಸರ್ಕಾರಕ್ಕೆ ಮರುಪಾವತಿ ಮಾಡತಕ್ಕದ್ದೆಂದು ನಿರ್ದೇಶಿಸುವುದು ಕೇಂದ್ರ ಸರ್ಕಾರಕ್ಕೆ ಸಕ್ಷಮವಾಗಿರತಕ್ಕದ್ದು:

ಪರಂತು, ಸಂಬಂಧಪಟ್ಟ ಅಧಿಕಾರಿಗೆ ಅಂಥ ಘೋಷಣೆ ಅಥವಾ ನಿರ್ದೇಶನದ ವಿರುದ್ಧ ಕಾರಣ ತೋರಿಸಲು ಅವಕಾಶವನ್ನು ಕೊಟ್ಟ ಹೊರತು ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡುವಲ್ಲಿ ಕೇಂದ್ರ ಸರ್ಕಾರವು, ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು, ಎಂದರೆ:–

(i) ಸಂಬಂಧಪಟ್ಟ ಅಧಿಕಾರಿಯ ಹಣಕಾಸಿನ ಪರಿಸ್ಥಿತಿಗಳು:

(ii) ಸಂಬಂಧಪಟ್ಟ ಅಧಿಕಾರಿಯು ತೆಗೆದುಕೊಂಡ ವಾಣಿಜ್ಯ ನಿಯೋಜನೆಯ ಸ್ವರೂಪ ಮತ್ತು ಅದರಿಂದ ಪಡೆದ ಉಪಲಬ್ಧಿಗಳು:

(iii) ನಿಯಮಿಸಬಹುದಾದಂಥ ಇತರ ಸಂಬಂಧಪಟ್ಟ ಅಂಶಗಳು.

(8) ಉಪಪ್ರಕರಣ (7)ರ ಮೇರೆಗೆ ಆದೇಶದ ಮೂಲಕ ಮರುಪಾವತಿ ಮಾಡಬೇಕೆಂದು ಅಗತ್ಯಪಡಿಸಿದ ಯಾವುದೇ ಮೊಬಲಗನ್ನು ನಿಯಮಿಸಿದ ಅವಧಿಯೊಳಗೆ ಮರುಪಾವತಿ ಮಾಡದಿದ್ದರೆ ಅದನ್ನು ಭೂ ಕಂದಾಯದ ಬಾಕಿಗಳ ಹಾಗೆ ವಸೂಲಿ ಮಾಡತಕ್ಕದ್ದು.

(9) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಪ್ರತಿಯೊಂದು ಆದೇಶವನ್ನು ಸಂಬಂಧಪಟ್ಟ ಅಧಿಕಾರಿಗೆ ತಿಳಿಸತಕ್ಕದ್ದು.

(10) ಈ ಪ್ರಕರಣದ ಉಪಬಂಧಗಳು, ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಅಥವಾ ಯಾವುದೇ ವಂತಿಗೆ ಭವಿಷ್ಯನಿಧಿಗೆ ಅನ್ವಯವಾಗುವ ನಿಯಮಗಳಲ್ಲಿ ತದ್ವಿರುದ್ಧವಾದುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕದ್ದು.

(11) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ: ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ

ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**7. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**8. ಈ ಅಧಿನಿಯಮವನ್ನು ಇತರ ಭವಿಷ್ಯ ನಿಧಿಗಳಿಗೆ ಅನ್ವಯಿಸುವ ಅಧಿಕಾರ.–** (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ 6ಎ ಪ್ರಕರಣವನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳು ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, 1914 (1914ರ 9) ರ ಅರ್ಥವ್ಯಾಪ್ತಿಯೊಳಗೆ ಯಾವುದೇ ಸ್ಥಳೀಯ ಪ್ರಾಧಿಕಾರವು ತನ್ನ ನಿಯೋಜಿತರ ಪ್ರಯೋಜನಕ್ಕಾಗಿ ಸ್ಥಾಪಿಸಿದ ಯಾವುದೇ ಭವಿಷ್ಯ ನಿಧಿಗೆ ಅನ್ವಯವಾಗತಕ್ಕದೆಂದು ನಿರ್ದೇಶಿಸಬಹುದು ಮತ್ತು ಅಂಥ ಘೋಷಣೆಯನ್ನು ಮಾಡಿದ ಮೇಲೆ, ಈ ಅಧಿನಿಯಮವು, ಅಂಥ ಭವಿಷ್ಯ ನಿಧಿಯ ಸರ್ಕಾರಿ ಭವಿಷ್ಯ ನಿಧಿಯಾಗಿದ್ದಿದ್ದರೆ ಮತ್ತು ಅಂಥ ಸ್ಥಳೀಯ ಪ್ರಾಧಿಕಾರವು ಸರ್ಕಾರವಾಗಿದ್ದಿದ್ದರೆ ಹೇಗೋ ಹಾಗೆ ತದನುಸಾರವಾಗಿ ಅನ್ವಯವಾಗತಕ್ಕದ್ದು:

(2) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ 6ಎ ಪ್ರಕರಣವನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸಂಸ್ಥೆ ಅಥವಾ ಅಂಥ ಸಂಸ್ಥೆಗಳ ಯಾವುದೇ ಗುಂಪಿನ ನಿಯೋಜಿತನ ಪ್ರಯೋಜನಕ್ಕಾಗಿ ಸ್ಥಾಪಿಸಿದ ಯಾವುದೇ ಭವಿಷ್ಯನಿಧಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ಘೋಷಣೆಯನ್ನು ಮಾಡಿದ ಮೇಲೆ ಈ ಅಧಿನಿಯಮವು, ಅಂಥ ಭವಿಷ್ಯ ನಿಧಿಯು ಸರ್ಕಾರಿ ಭವಿಷ್ಯ ನಿಧಿಯಾಗಿದಿದ್ದರೆ ಮತ್ತು ಆ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ಪ್ರಾಧಿಕಾರವು ಸರ್ಕಾರವಾಗಿದಿದ್ದರೆ ಹೇಗೋ ಹಾಗೆ ತದನುಸಾರವಾಗಿ ಅನ್ವಯವಾಗತಕ್ಕದ್ದು:

ಪರಂತು, 6ನೇ ಪ್ರಕರಣವು, ಆ ಪ್ರಕರಣದಲ್ಲಿ ಉಲ್ಲೇಖಿಸಿದ ವಂತಿಗೆಗಳನ್ನು ಕೊಡುವ ಪ್ರಾಧಿಕಾರವು ಸರ್ಕಾರವಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(3) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅದು ಯುಕ್ತವೆಂದು ಭಾವಿಸಬಹುದಾದ ಯಾವುದೇ ಸಾರ್ವಜನಿಕ ಸಂಸ್ಥೆಯ ಹೆಸರನ್ನು ಅನುಸೂಚಿಗೆ ಸೇರಿಸಬಹುದು ಮತ್ತು

ಯಾವುದೇ ಅಂಥ ಸೇರ್ಪಡೆಯು, ಈ ಅಧಿನಿಯಮದ ಮೂಲಕ ಅದನ್ನು ಮಾಡಲಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(4) ಈ ಪ್ರಕರಣದಲ್ಲಿ 'ಸಮುಚಿತ ಸರ್ಕಾರ' ಎಂದರೆ,–

(ಎ) ದಂಡು ಪ್ರದೇಶದ ಪ್ರಾಧಿಕಾರ, ಮುಖ್ಯ ಬಂದರಿನ ಬಂದರು ಪ್ರಾಧಿಕಾರ ಮತ್ತು ಯಾವ ಸಂಸ್ಥೆ ಅಥವಾ ಯಾವುದರ ಉದ್ದೇಶಗಳು, ಸಂವಿಧಾನದ ಏಳನೇ ಅನುಸೂಚಿಯಲ್ಲಿನ 1ನೇ ಪಟ್ಟಿಯೊಳಗೆ ಬರುವುದೆಂದು ಕೇಂದ್ರ ಸರ್ಕಾರಕ್ಕೆ ಕಂಡುಬರುವುದೋ ಆ ಯಾವುದೇ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರ; ಮತ್ತು

(ಬಿ) ಇತರ ಸಂದರ್ಭಗಳಲ್ಲಿ, ರಾಜ್ಯ ಸರ್ಕಾರ.

**ವಿವರಣೆ.–** ಸಂಘಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ನೋಂದಾಯಿತವಾದ ಸಂಸ್ಥೆಗೆ ಸಂಬಂಧಪಟ್ಟಂತೆ 'ರಾಜ್ಯ ಸರ್ಕಾರ' ಎಂದರೆ ಆ ಸಂಘವು ನೋಂದಾಯಿತವಾಗಿರುವಂಥ ರಾಜ್ಯದ ರಾಜ್ಯ ಸರ್ಕಾರ.

**9. ಸೈನಿಕರ ಸಂಪದಗಳ ಬಗ್ಗೆ ಉಳಿಸುವಿಕೆಗಳು.–** 4ನೇ ಪ್ರಕರಣ ಅಥವಾ 5ನೇ ಪ್ರಕರಣದಲ್ಲಿರುವುದಾವುದೂ ಯಾವ ಆಡಳಿತದ ಉದ್ದೇಶಕ್ಕಾಗಿ ರೆಜಿಮೆಂಟಲ್ ಋಣಗಳ ಅದಿನಿಯಮ, 1893 (56 ಮತ್ತು 57 ವಿಕ್ಟೋರಿಯಾ ಸಿ. 5) ಅನ್ವಯವಾಗಿತ್ತದೋ ಆ ಆಡಳಿತದ ಉದ್ದೇಶಕ್ಕಾಗಿ ಯಾವುದೇ ಸಂಪದಕ್ಕೆ ಸೇರಿದ ಹಣಕ್ಕೆ ಅನ್ವಯವಾಗತಕ್ಕದ್ದಲ್ಲ.

**10. ನಿರಸನಗಳು.–** ನಿರಸನಗೊಳಿಸುವ ಅಧಿನಿಯಮ, 1927 (1927ರ 12)ರ 2ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

## ಅನುಸೂಚಿ

## ಸಂಸ್ಥೆಗಳ ಪಟ್ಟಿ

**(8ನೇ ಪ್ರಕರಣದ (2)ನೇ ಉಪಪ್ರಕರಣವನ್ನು ನೋಡಿ)**

1. ಭಾರತದ ಪಾಶ್ಚಿಯರ್ ಸಂಸ್ಥೆ, ಕಸೌಲಿ
2. ಕಲ್ಕತ್ತ ಅಭಿವೃದ್ಧಿ ನ್ಯಾಯಾಧಿಕರಣ
3. ಪ್ರತಿಪಾಲಿತರ ನ್ಯಾಯಾಲಯ

4. ಭಾರತ ಕೇಂದ್ರಿಯ ಹತ್ತಿ ಸಮಿತಿ

5. ರಾಂಚಿಯಲ್ಲಿರುವ ಮಾನಸಿಕ ರೋಗಗಳಿಗಾಗಿ ಯುರೋಪಿಯನ್ ಆಸ್ಪತ್ರೆಗಾಗಿನ ನ್ಯಾಸಧಾರಿಗಳು

6. ಭಾರತದ ಮಹಿಳೆಯರಿಗೆ ಮಹಿಳಾ ವೈದ್ಯಕೀಯ ನೆರವನ್ನು ಸರಬರಾಜು ಮಾಡುವ ರಾಷ್ಟ್ರೀಯ ಸಂಘ

7. ಶಾಸನದ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಕಾಲೇಜು

8. ಭಾರತ ಕಲ್ಲಿದ್ದಲು ದರ್ಜೆ ನಿರ್ಧರಣಾ ಮಂಡಲಿ

9. ಲೇಡಿ ಮಿಂಟೋ ಭಾರತದ ಶುಶ್ರೂಷಾ ಸಂಘ

10. ಭಾರತದ ರೆಡ್‌ಕ್ರಾಸ್ ಸೊಸೈಟಿ

11. ಭಾರತದ ಅರಗು ಉಪಕರ ಸಮಿತಿ

12. ಭಾರತ ರೆಡ್‌ಕ್ರಾಸ್ ಸೊಸೈಟಿಯ ಮದ್ರಾಸ್ ರಾಜ್ಯ ಶಾಖೆ

13. ಭಾರತ ಇಂಪಿರೀಯಲ್ ಬ್ಯಾಂಕ್

14. ಬಿಹಾರ ಮತ್ತು ಒರಿಸ್ಸಾ ವೈದ್ಯಕೀಯ ಪರೀಕ್ಷಾ ಶಿಕ್ಷಣ ಮಂಡಲಿ

15. XXX

16. ಚಹಾ ಜಿಲ್ಲೆಗಳ ವಲಸೆ ಕಾರ್ಮಿಕರ ಅಧಿನಿಯಮ, 1932 ರ ಮೇರೆಗೆ ವಲಸೆ ಕಾರ್ಮಿಕರ ನಿಯಂತ್ರಣಕ್ಕಾಗಿ ಸ್ಥಾಪಿಸಿದ ಸಂಸ್ಥೆ

17. ಮುಂಬಯಿ ಚಲನಚಿತ್ರ ಪರಿಶೀಲನಾ ಮಂಡಲಿ

18. ಕಲ್ಕತ್ತಾ ವಿಶ್ವವಿದ್ಯಾನಿಲಯ

19. ಕೇಂದ್ರ ನೀರಾವರಿ ಮಂಡಲಿ

20. ಭಾರತದ ರಿಸರ್ವ್ ಬ್ಯಾಂಕ್

21. XXX

22. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ

23. ಭಾರತ ವೈದ್ಯಕೀಯ ಪರಿಷತ್ತು

24. ಭಾರತ ಕಾಫಿ ಉಪಕರ ಸಮಿತಿ

25. ಅಂತರರಾಜ್ಯ ಆಂಗ್ಲೋ ಇಂಡಿಯನ್ ಮತ್ತು ಯುರೋಪಿಯನ್ ಶಿಕ್ಷಣ ಮಂಡಲಿ

26. ಭಾರತದ ಸಂಶೋಧನಾ ನಿಧಿ ಸಂಘ

27. ದೆಹಲಿ ಜಲ ಮತ್ತು ಗ್ರಾಮಸಾರ ಜಂಟಿ ಮಂಡಲಿ

28. ಭಾರತದ ಕ್ಷಯರೋಗ ಸಂಘ

29. ಕಲ್ಲಿದ್ದಲು ಗಣಿಗಳ ದಾಸ್ತಾನು ಮಂಡಲಿ

30. ಭಾರತದ ರೈಲ್ವೆ ಸ್ಲೀಪರ್ ಪೂಲ್ ಸಮೂಹ ಸಮಿತಿ

31. ಭಾರತ ಕಾಫಿ ಮಾರುಕಟ್ಟೆ ವಿಸ್ತರಣಾ ಮಂಡಲಿ

32. ಕಲ್ಲಿದ್ದಲು ಗಣಿಗಳ ರಕ್ಷಣಾ ಠಾಣೆಗಳ ಸಮಿತಿ

33. ಭಾರತದ ಕಾಫಿ ಮಂಡಲಿ

34. XXX

35. ಭಾರತದ ರಬ್ಬರ್ ಮಂಡಲಿ

36. ಭಾರತ ಕೇಂದ್ರೀಯ ಕಬ್ಬು ಸಮಿತಿ

37. ಅಖಿಲ ಭಾರತ ಜಾನುವಾರು ಪ್ರದರ್ಶನ ಸಮಿತಿ

38. ಕಲ್ಲಿದ್ದಲು ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ

39. ಭಾರತದ ತೆಂಗು ಸಮಿತಿ

40. ಭಾರತ ಕೇಂದ್ರ ತಂಬಾಕು ಸಮಿತಿ

41. ನಿಯೋಜಿತರ ರಾಜ್ಯ ವಿಮಾ ನಿಗಮ

42. ಭಾರತ ಚಹಾ ಲೈಸೆನ್ಸಿಂಗ್ ಸಮಿತಿ

43. ಕಲ್ಲಿದ್ದಲು ಗಣಿಗಳು (ಸಂರಕ್ಷಣೆ ಮತ್ತು ಸಂರಕ್ಷತೆ) ಅಧಿನಿಯಮ, 1952 (1952 ರ 12) ರ ಮೇರೆಗೆ ಸ್ಥಾಪಿಸಲಾದ ಕಲ್ಲಿದ್ದಲು ಮಂಡಲಿ

44. ದೆಹಲಿ ರಸ್ತೆ ಸಾರಿಗೆ ಪ್ರಾಧಿಕಾರ, ನವದೆಹಲಿ

45. ಕೇಂದ್ರ ಚಹಾ ಮಂಡಲಿ

46. ಭಾರತ ಕೇಂದ್ರ ಎಣ್ಣೆ ಬೀಜಗಳ ಸಮಿತಿ

47. ದೇಶೀಯ ವೈದ್ಯಕೀಯ ಪದ್ಧತಿಗಳ ಸಂಶೋಧನಾ ಕೇಂದ್ರೀಯ ಸಂಸ್ಥೆ, ಜಾಮ್‌ನಗರ

48. ಭಾರತ ಮಾನಕಗಳ ಸಂಸ್ಥೆ, ದೆಹಲಿ

49. ಜವಳಿ ಸಮಿತಿ

50. ದೇಶಬಂಧು ಕಾಲೇಜು, ಕಾಲ್‌ಕಾಜಿ

51. ದಾಮೋದರ್ ಕಣಿವೆ ನಿಗಮ

52. ಕೇಂದ್ರ ರೇಷ್ಮೆ ಮಂಡಲಿ

53. ವಿಶ್ವವಿದ್ಯಾನಿಲಯ ಅನುದಾನ ಆಯೋಗ, ನವದೆಹಲಿ

54. ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ

55. ಲಾರೆನ್ಸ್ ಸ್ಕೂಲ್ (ಸಾನಾವಾರ್) ಸಂಘ

56. ಕಲಾವತಿ ಶರಣ್ ಮಕ್ಕಳ ಆಸ್ಪತ್ರೆ, ನವದೆಹಲಿ

57. ಶ್ರೀ ಗುರು ತೇಜ್‌ಬಹದ್ದೂರ್ ಖಾಲ್ಸಾ ಕಾಲೇಜು, ದೆಹಲಿ

58. ಚಹಾ ಮಂಡಲಿ

59. ಲೇಡಿ ಶ್ರೀ ರಾಮ್ ಮಹಿಳಾ ಕಾಲೇಜು, ನವದೆಹಲಿ

60. ಭಾರತ ಸಾರ್ವಜನಿಕ ಆಡಳಿತ ಸಂಸ್ಥೆ, ನವದೆಹಲಿ

61. ಕೆಲಸಗಾರರ ಶಿಕ್ಷಣ ಕೇಂದ್ರ ಮಂಡಲಿ

62. ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ

63. ಯೋಜನಾ ಮತ್ತು ವಾಸ್ತುಶಿಲ್ಪ ಶಾಲೆ, ನವದೆಹಲಿ

64. ನಿಯೋಜಿತರ ಭವಿಷ್ಯನಿಧಿ ಯೋಜನೆ, 1952ರ ಮೇರೆಗೆ ಸ್ಥಾಪಿತವಾದ ಭವಿಷ್ಯನಿಧಿ ಆಡಳಿತಕ್ಕಾಗಿ ನ್ಯಾಸಧಾರಿಗಳ ಕೇಂದ್ರ ಮಂಡಲಿ

65. ಗುಜರಾತ್ ರಾಜ್ಯ ರಸ್ತೆ ಸಾರಿಗೆ ನಿಗಮ

66. ರಾಜ್ಯ ಹಣಕಾಸು ನಿಗಮಗಳ ಅಧಿನಿಯಮ, 1951 (1951ರ 63) ರ ಮೇರೆಗೆ ಸ್ಥಾಪಿತವಾದ (ನಿಗಮನಗೊಂಡ) ಉತ್ತರ ಪ್ರದೇಶ ಹಣಕಾಸು ನಿಗಮ

67. ಭಾರತ ಯಂತ್ರ ವಿಜ್ಞಾನ ಸಂಸ್ಥೆ, ಮುಂಬಯಿ

68. ಭಾರತ ನರ್ಸಿಂಗ್ ಪರಿಷತ್ತು

69. ರಾಜ್ಯ ಹಣಕಾಸು ನಿಗಮಗಳ ಅಧಿನಿಯಮ, 1951 (1951 ರ 63) ರ ಮೇರೆಗೆ ಸ್ಥಾಪಿತವಾದ (ನಿಗಮನಗೊಂಡ) ಗುಜರಾತ್ ರಾಜ್ಯ ಹಣಕಾಸು ನಿಗಮ

70. ಭಾರತ ಯಂತ್ರ ವಿಜ್ಞಾನ ಸಂಸ್ಥೆ, ಮದ್ರಾಸು

71. ರಾಜ್ಯ ಹಣಕಾಸು ನಿಗಮಗಳ ಅಧಿನಿಯಮ 1951 (1951 ರ 63) ರ ಮೇರೆಗೆ ನಿಗಮನಗೊಂಡ ರಾಜಸ್ಥಾನದ ಹಣಕಾಸು ನಿಗಮ

72. ಏರ್ ಇಂಡಿಯಾ ಅಂತರರಾಷ್ಟ್ರೀಯ ನಿಗಮ

73. ಸಾಹಿತ್ಯ ಅಕಾಡೆಮಿ, ನವದೆಹಲಿ

74. ಪನ್ನಾಲಾಲ್ ಗಿರಿಧರ್‌ಲಾಲ್ ಡಿ.ಎ.ವಿ.ಕಾಲೇಜು, ನವದೆಹಲಿ

75. ದೆಹಲಿ ಸಮಾಜ ಕೆಲಸದ ಶಾಲೆ, ದೆಹಲಿ

76. ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ

77. ಕಲ್ಲಿದ್ದಲು ಗಣಿಗಳ ಭವಿಷ್ಯ ನಿಧಿಗಳ ಯೋಜನೆ, 1948ರ ಮೇರೆಗೆ ಸ್ಥಾಪಿತವಾದ ಭವಿಷ್ಯ ನಿಧಿಯ ಆಡಳಿತಕ್ಕಾಗಿನ ನ್ಯಾಸಧಾರಿಗಳ ಮಂಡಲಿ

78. ಜಾನಕಿದೇವಿ ಮಹಾ ವಿದ್ಯಾಲಯ, ನವದೆಹಲಿ

79. ಭಾರತ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು, ನವದೆಹಲಿ

80. ರಾಷ್ಟ್ರೀಯ ಉತ್ಪಾದನಾ ಪರಿಷತ್ತು

81. ರಾಷ್ಟ್ರೀಯ ಕೈಗಾರಿಕಾ ಅಭಿವೃದ್ಧಿ ನಿಗಮ, ಪರಿಮಿತ

82. ಆಯುರ್ವೇದ ಸ್ನಾತಕೋತ್ತರ ಪದವಿ ತರಬೇತಿ ಕೇಂದ್ರ, ಜಾಮ್‌ನಗರ

83. ಭಾರತ ಹೂಡಿಕೆ ಕೇಂದ್ರ, ನವದೆಹಲಿ

84. ಇಂಡಿಯನ್ ಏರ್‌ಲೈನ್ಸ್ ನಿಗಮ

85. ಭಾರತ ಯಂತ್ರ ವಿಜ್ಞಾನ ಸಂಸ್ಥೆ, ಕಾನ್ಪುರ

86. ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ನಿಯಂತ್ರಣ) ಅಧಿನಿಯಮ, 1948 (1948ರ 9) ರ ಮೇರೆಗೆ ಸ್ಥಾಪಿತವಾದ ವಿಶಾಖಪಟ್ಟಣ ಹಡಗುಕಟ್ಟೆ ಕಾರ್ಮಿಕ ಮಂಡಲಿ

87. ಕೇಂದ್ರ ಸಮಾಜ ಕಲ್ಯಾಣ ಮಂಡಲಿ

88. ರಾಜ್ಯ ಹಣಕಾಸು ನಿಗಮಗಳ ಅಧಿನಿಯಮ, 1951 (1951ರ 63) ರ ಮೇರೆಗೆ ನಿಗಮನಗೊಂಡ ಒರಿಸ್ಸಾ ರಾಜ್ಯ ಹಣಕಾಸು ನಿಗಮ

89. ಸಂಗೀತ ನಾಟಕ ಅಕಾಡೆಮಿ, ನವದೆಹಲಿ

90. ಆರ್ಥಿಕ ಬೆಳವಣಿಗೆ ಸಂಸ್ಥೆ, ದೆಹಲಿ

91. ದೆಹಲಿ ವಕ್ಫ್ ಮಂಡಲಿ

92. ಅನ್ವಯಿಕ ಮಾನವ ಶಕ್ತಿ ಸಂಶೋಧನಾ ಸಂಸ್ಥೆ, ನವದೆಹಲಿ

93. ಭಾರತ ಕಾನೂನು ಸಂಸ್ಥೆ

94. ಭಾರತ ಯಂತ್ರ ವಿಜ್ಞಾನ ಸಂಸ್ಥೆ, ದೆಹಲಿ

95. ದಯಾಲಿ ಸಿಂಗ್ ಕಾಲೇಜ್, ನವದೆಹಲಿ

96. ಪ್ರಮಿಳಾ ಕಾಲೇಜ್, ದೆಹಲಿ

97. ಸನಾತನ ಧರ್ಮ ಕಾಲೇಜ್, ನವದೆಹಲಿ

98. ಭಾರತದ ಔಷಧಾಲಯ ಪರಿಷತ್ತು

99. ಭಾರತ ವ್ಯವಸ್ಥಾಪನಾ ಸಂಸ್ಥೆ, ಕಲ್ಕತ್ತ

100. ಸೈನಿಕ ಶಾಲೆಗಳ ಸಂಘ

101. ಸಾಲಾರ್ ಜಂಗ್ ವಸ್ತು ಸಂಗ್ರಹಾಲಯ ಮಂಡಲಿ, ಹೈದರಾಬಾದು

102. ಲಲಿತಕಲಾ ಅಕಾಡೆಮಿ, ನವದೆಹಲಿ

103. ರಾಜ್ಯ ಹಣಕಾಸು ನಿಗಮಗಳ ಅಧಿನಿಯಮ, 1951 (1951ರ 63)ರ ಮೇರೆಗೆ ನಿಗಮನಗೊಂಡ ಮಧ್ಯಪ್ರದೇಶ ಹಣಕಾಸು ನಿಗಮ

104. ಗೋಸಂವರ್ಧನಾ ಕೇಂದ್ರ ಪರಿಷತ್ತು

105. ಭಾರತದ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (1955 ರ 23) ದ ಮೇರೆಗೆ ರಚಿತವಾದ ಭಾರತ ಸ್ಟೇಟ್ ಬ್ಯಾಂಕ್.

106. ಅಖಿಲ ಭಾರತ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ, ಬೆಂಗಳೂರು

107. ಭಾರತ ವಿದೇಶ ವ್ಯಾಪಾರ ಸಂಸ್ಥೆ, ನವದೆಹಲಿ

108. ದೆಹಲಿ ಗ್ರಂಥಾಲಯ ಮಂಡಲಿ, ದೆಹಲಿ

109. ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ನವದೆಹಲಿ

110. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು

111. ಭಾರತ ವಸ್ತು ಸಂಗ್ರಹಾಲಯ, ಕಲ್ಕತ್ತ

112. ಭಾರತ ವೃತ್ತ ಪತ್ರಿಕಾ ಪರಿಷತ್ತು.

113. ರಾಷ್ಟ್ರೀಯ ಶೈಕ್ಷಣಿಕ, ಸಂಶೋಧನಾ ಮತ್ತು ತರಬೇತಿ ಪರಿಷತ್ತು.

114. ಭಾರತ ಸಮೂಹ ಸಂಪರ್ಕ ಸಂಸ್ಥೆ.

115. ರಾಷ್ಟ್ರೀಯ ಕೈಗಾರಿಕಾ ಇಂಜಿನಿಯರಿಂಗ್ ತರಬೇತಿ ಸಂಸ್ಥೆ, ಮುಂಬಯಿ.

116. ಕೊಚ್ಚಿನ್ ಪೋರ್ಟ್ ಟ್ರಸ್ಟ್.

117. ವಿಶಾಖಪಟ್ಟಣಂ ಪೋರ್ಟ್ ಟ್ರಸ್ಟ್.

118. ಕಾಂಡ್ಲಾ ಪೋರ್ಟ್ ಟ್ರಸ್ಟ್.

119. ಮರ್ಮುಗಾವ್ ಪೋರ್ಟ್ ಟ್ರಸ್ಟ್.

120. ಪರಾದೀಪ್ ಪೋರ್ಟ್ ಟ್ರಸ್ಟ್.

121. ನೆಹರು ಸ್ಮಾರಕ ವಸ್ತು ಸಂಗ್ರಹಾಲಯ ಮತ್ತು ಗ್ರಂಥಾಲಯ, ನವದೆಹಲಿ.

122. ಭಾರತ ರಾಷ್ಟ್ರೀಯ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ.

123. ಭಾರತ ರಫ್ತು ಪರಿಶೀಲನಾ ಪರಿಷತ್ತು.

124. ರಫ್ತು ಪರಿಶಿಲನಾ ಏಜೆನ್ಸಿ, ಮುಂಬಯಿ.

125. ರಫ್ತು ಪರಿಶಿಲನಾ ಏಜೆನ್ಸಿ, ದೆಹಲಿ.

126. ರಫ್ತು ಪರಿಶಿಲನಾ ಏಜೆನ್ಸಿ, ಕಲ್ಕತ್ತ.

127. ರಫ್ತು ಪರಿಶಿಲನಾ ಏಜೆನ್ಸಿ, ಮದ್ರಾಸ್.

128. ರಫ್ತು ಪರಿಶಿಲನಾ ಏಜೆನ್ಸಿ, ಕೊಚ್ಚಿನ್.

129. ರಾಷ್ಟ್ರೀಯ ಫೌಂಡ್ರಿ ಮತ್ತು ಪೋರ್ಟ್ ಯಂತ್ರ ವಿಜ್ಞಾನ ಸಂಸ್ಥೆ, ರಾಂಚಿ.

130. ಭಾರತದ ಯೂನಿಟ್ ಟ್ರಸ್ಟ್ ಅಧಿನಿಯಮ, 1963 (1963ರ 52) ರ ಮೇರೆಗೆ ಸ್ಥಾಪಿತವಾದ ಭಾರತ ಯೂನಿಟ್ ಟ್ರಸ್ಟ್.

131. ಭಾರತ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು, ನವದೆಹಲಿ.

132. ರಾಷ್ಟ್ರೀಯ ಬ್ಯಾಂಕು ವ್ಯವಸ್ಥಾಪನಾ ಸಂಸ್ಥೆ, ಮುಂಬಯಿ.

133. ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಚಂಡೀಘಡ.

134. ಏಲಕ್ಕಿ ಅಧಿನಿಯಮ, 1965 (1965ರ 42) ರ ಮೇರೆಗೆ ಸ್ಥಾಪಿತವಾದ ಏಲಕ್ಕಿ ಮಂಡಲಿ.

135. ವಿಕ್ಟೋರಿಯಾ ಸ್ಮಾರಕ ಭವನ, ಕಲ್ಕತ್ತ.

136. ಕೇಂದ್ರ ಸಾರ್ವಜನಿಕ ಸಹಕಾರ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ನವದೆಹಲಿ.

137. ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ನಿಯಂತ್ರಣ) ಅಧಿನಿಯಮ, 1948 (1948 ರ 9) ರ ಮೇರೆಗೆ ಸ್ಥಾಪಿತವಾದ ಮರ್ಮುಗಾವ್ ಹಡಗುಕಟ್ಟೆ ಕಾರ್ಮಿಕ ಮಂಡಲಿ

138. ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ನಿಯಂತ್ರಣ) ಅಧಿನಿಯಮ, 1948 (1948 ರ 9) ರ ಮೇರೆಗೆ ಸ್ಥಾಪಿತವಾದ ಕೊಚ್ಚಿನ್ ಹಡಗುಕಟ್ಟೆ ಕಾರ್ಮಿಕ ಮಂಡಲಿ

139. ಸಂವಿಧಾನ ಮತ್ತು ಸಂಸದೀಯ ಅಧ್ಯಯನಗಳ ಸಂಸ್ಥೆ, ನವದೆಹಲಿ

140. ರಕ್ಷಣಾ ಅಧ್ಯಯನ ಮತ್ತು ವಿಶ್ಲೇಷಣಾ ಸಂಸ್ಥೆ, ನವದೆಹಲಿ

141. ಕಾರ್ಯನೀತಿ ಸಂಶೋಧನಾ ಕೇಂದ್ರ, ನವದೆಹಲಿ

142. ಕಬ್ಬಿಣ ಅದಿರು ಮಂಡಲಿ

143. ಐತಿಹಾಸಿಕ ಸಂಶೋಧನಾ ಪರಿಷತ್ತು, ನವದೆಹಲಿ

144. ಭಾರತ ಗಣಿ ಶಾಲೆ, ಧನ್‌ಬಾದ್

145. ನಾವಿಕರ ಭವಿಷ್ಯನಿಧಿ ಸಂಸ್ಥೆ

146. ಗ್ರಾಮೀಣ ವಿದ್ಯುದೀಕರಣ ನಿಗಮ, ನಿಯಮಿತ

147. ಭಾರತ ಜೀಯೋಮಾಗ್ನಿಟಿಸಂ ಸಂಸ್ಥೆ, ಮುಂಬಯಿ

148. ಕೇಂದ್ರೀಯ ವಿದ್ಯಾಲಯ, ಸಂಘಟನೆ

149. ಬಾಲಭವನ ಸಂಘ, (ಭಾರತ)

150. ಪವರ್ ಇಂಜಿನಿಯರುಗಳ ತರಬೇತಿ ಸಂಘ

151. ರಾಷ್ಟ್ರೀಯ ಜಲವಿಜ್ಞಾನ ಸಂಸ್ಥೆ

152. ರಾಮನ್ ಸಂಶೋಧನಾ ಸಂಸ್ಥೆ, ಬೆಂಗಳೂರು

153. ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ನವದೆಹಲಿ

154. ರಾಷ್ಟ್ರೀಯ ಕಾರ್ಮಿಕ ಸಂಸ್ಥೆ

155. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ, ನವದೆಹಲಿ

156. ರಾಷ್ಟ್ರೀಯ ಜಲ ಅಭಿವೃದ್ಧಿ ಏಜೆನ್ಸಿ, ನವದೆಹಲಿ

157. ದೆಹಲಿ ಅಭಿವೃದ್ಧಿ ಪ್ರಾಧಿಕಾರ